**SC No. 205/2022**
**PW-4**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

## ಎಸ್.ಸಿ ನಂಃ 205/22

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುಬಾನಿ ಬೀಡಿ | ಪ್ರಾಸಾಃ 4 |
| ತಂದೆಯ ಹೆಸರು | : | ಇಸ್ಮಾಯಿಲ ಬೀಡಿ | ಚಾಸಾಃ 11 |
| ಪ್ರಾಯ | : | 32 ವರ್ಷ | ದಿಃ 19.02.2025 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಕೂಲಿಕೆಲಸ | |
| ವಾಸಸ್ಥಳ | : | ಬುರಣಕಿ, ತಾಃ ಖಾನಾಪೂರ, ಜಿಃ ಬೆಳಗಾವಿ | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ಇಸ್ಮಾಯಿಲ್ ಬೀಡಿ ನನ್ನ ತಂದೆ. ಚಾಸಾ-10 ಶ್ರೀಮತಿ ಹಸೀನಾ ಬೀಡಿ ನನ್ನ ತಾಯಿ. ನನ್ನ ತಂದೆ-ತಾಯಿಗೆ ನಾನು ಸೇರಿ ಒಟ್ಟು ಮೂರು ಜನ ಮಕ್ಕಳು. ನನ್ನ ತಂದೆ ಇನ್ನಿಬ್ಬರೂ ಮಕ್ಕಳು ಶಬಾನಾ ಮತ್ತು ಅರಿಫಾ. ಅವರೀಬ್ಬರೂ ನನ್ನ ತಂಗಿಯಂದಿರು. ನನ್ನ ತಂಗಿ ಅರಿಫಾ ಇವಳನ್ನು ಯಕ್ಕುಂಡಿ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತೇವೆ. ಶಬಾನಾಳನ್ನು ಮುನವಳ್ಳಿ ಗ್ರಾಮದ ಮೆಹಬೂಬಸಾಬ್ ಗೊರವನಕೊಳ್ಳ ಇವರಿಗೆ 2012

ರ ಪೆಬ್ರುವರಿ ತಿಂಗಳಿನಲ್ಲಿ ಮದುವೆ ಮಾಡಿ ಕೊಟ್ಟಿರುತ್ತೇವೆ. ಸದರಿ ಮೆಹಬೂಬಸಾಬ್ ಈ ಕೇಸಿನ ಆರೋಪಿಯಾಗಿರುತ್ತಾನೆ. ಶಬಾನಾ ಮತ್ತು ಆರೋಪಿಗೆ ಸುಪಿಯಾನ ಮತ್ತು ಆಲಿಯಾ ಇಬ್ಬರು ಮಕ್ಕಳು. ಆಲಿಯಾ ಈ ಕೇಸಿನ ಸಾಕ್ಷಿದಾರಳಾದ ಪ್ರಾಸಾ-2 ಇರುತ್ತಾಳೆ.

ಶಬಾನಾ ಮದುವೆಯಾದ ನಂತರ ಆರೋಪಿಯ ಜೊತೆ ಆತನ ಮನೆ ಮುನವಳ್ಳಿಯಲ್ಲಿ ವಾಸ ಮಾಡುತ್ತಿದ್ದಳು. ಈಗ ಮೂರು ವರ್ಷಗಳ ಹಿಂದೆ ಶಬಾನಾ ಸವದತ್ತಿಗೆ ಬಂದು ಅಲ್ಲಿ ಆರೋಪಿ ಮತ್ತು ಆಕೆ ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದಳು. ಆರೋಪಿಯು ಶಬಾನಾಳ ಮೇಲೆ ಸಂಶಯ ಪಟ್ಟು ಆಕೆಗೆ ಹಿಂಸೆ ನೀಡುತ್ತಿದ್ದ. ಸದರಿ ವಿಷಯವನ್ನು ಶಬಾನಾ ನಮ್ಮ ಊರಿಗೆ ಬಂದಾಗ ನನ್ನಲ್ಲಿ ಹೇಳಿದ್ದಳು. ಆ ಬಗ್ಗೆ ನಮ್ಮ ಊರಿನ ಪ್ರಾಸಾ-1 ಮಹೇಶ ಪಾಟೀಲ, ಚಾಸಾ-15 ದಾದಾಪೀರ ಹುದಲಿ, ಚಾಸಾ-13 ಮುಕ್ತುಮಹುಸೇನ ಸಾವುಕಾರ, ಚಾಸಾ-12 ಮಹಮ್ಮದಶಮಿ ಇಟಗಿ, ಚಾಸಾ-16 ಮಮತಾಜ ಕಿತ್ತೂರ ಹಾಗೂ ನನ್ನ ತಂದೆ-ತಾಯಿ ಮತ್ತು ನಾನು ಮುನವಳ್ಳಿಗೆ ಹೋಗಿ ಆರೋಪಿಗೆ ಬುದ್ಧಿವಾದ ಹೇಳಿರುತ್ತೇವೆ.

ನಂತರ ದಿನಾಂಕ 18.08.2022 ರಂದು ಬೆಳಿಗ್ಗೆ 10.45 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಹುಸೇನಸಾಬ ಮಂಟೂರ (ಚಾಸಾ-20) ಇವರು ನನಗೆ ಪೋನ್ ಮಾಡಿ ನನ್ನ ತಂಗಿ ಶಬಾನಾಳನ್ನು ಆರೋಪಿ ಕೊಲೆ ಮಾಡಿರುತ್ತಾನೆ ಎಂದು ತಿಳಿಸಿರುತ್ತಾನೆ. ಸದರಿ ವಿಷಯ ತಿಳಿದ ನಂತರ ನಾನು, ನನ್ನ ತಂದೆ -ತಾಯಿ ಮತ್ತು ಈ ಮೇಲೆ ಹೇಳಿದ ಹಿರಿಯರೇಲ್ಲಾ ಸೇರಿಕೊಂಡು ಸವದತ್ತಿಯ ಶಬಾನಾ ವಾಸ ಮಾಡುತ್ತಿದ್ದ ಮನೆಗೆ ಹೋಗಿರುತ್ತೇವೆ. ಸದರಿ ಮನೆ ಅಯ್ಯಪ್ಪಾ ಸ್ವಾಮಿ ನಗರದಲ್ಲಿರುತ್ತದೆ. ಸದರಿ ಬಾಡಿಗೆ ಮನೆ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಮನೆಗೆ ಹೋಗಿ ನೋಡಿದಾಗ ಮನೆಯ

ಅರ್ಧ ಬಾಗಿಲು ತೆರೆದಿತ್ತು. ಮನೆಯೊಳಗೆ ನೆಲದ ಮೇಲೆ ಶಬಾನಾದ ಶವ ಬಿದ್ದಿತ್ತು. ನೆಲದ ಮೇಲೆ ರಕ್ತ ಇತ್ತು ಮತ್ತು ಬಾಗಿಲಿಗೆ ಸಹ ರಕ್ತ ಸಿಡಿದಿತ್ತು. ಆ ಸಮಯದಲ್ಲಿ ಮನೆಯಲ್ಲಿ ಪ್ರಾಸಾ-2 ಆಲಿಯಾ ಇದ್ದಳು. ಶಬಾನಾಳ ಶವ ನೋಡಿದಾಗ ಆಕೆಯ ಕುತ್ತಿಗೆ ಕೊಯ್ದಿತ್ತು. ಹೊಟ್ಟೆ, ಬೆನ್ನು, ಕೈ ಮತ್ತು ಕಾಲಿಗೆ ಚಾಕುವಿನಿಂದ ಚುಚ್ಚಿದ ಗಾಯಗಳು ಇದ್ದವು. ಆ ಸಮಯದಲ್ಲಿ ನಾವು ಪ್ರಾಸಾ-2 ಳನ್ನು ಕೇಳಿದಾಗ ಆಕೆ ನನ್ನಲ್ಲಿ ಅಪ್ಪ ಬಂದು ನನ್ನ ತಾಯಿಗೆ ಚಾಕುವಿನಿಂದ ಚುಚ್ಚಿ ರುತ್ತಾನೆ ಎಂದು ತಿಳಿಸಿರುತ್ತಾಳೆ. ಆ ನಂತರ ಪಕ್ಕದ ಮನೆಯ ಪ್ರಾಸಾ-3 ಚೋಪಡೆ ಮತ್ತು ಚಾಸಾ-6 ಮಂಜುಳಾ ಚೋಪಡೆ ಬಂದಿದ್ದಾಗ ಸಹ ಪ್ರಾಸಾ-2 ನೇಯವಳು ನನ್ನಲ್ಲಿ ಹೇಳಿರುತ್ತಾಳೆ. ಶಬಾನಾಳ ಕೊಲೆ ಬೆಳಿಗ್ಗೆ 10.45 ಗಂಟೆ ಸುಮಾರಿಗೆ ಆಗಿರುವುದಾಗಿ ನನಗೆ ತಿಳಿಯಿತು.

ಈ ಕೇಸಿಗೆ ಸಂಬಂಧಪಟ್ಟಂತೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಆರೋಪಿಯನ್ನು ನೋಡಿದರೇ ಗುರುತಿಸಬಲ್ಲೆ. ಈಗ ನ್ಯಾಯಾಲಯದ ಮುಂದೆ ವಿ.ಸಿ. ಮೂಲಕ ಹಾಜರಾಗಿರುವ ವ್ಯಕ್ತಿ ಸದರಿ ಆರೋಪಿಯಾಗಿರುತ್ತಾನೆ. ಘಟನೆಯ ಬಗ್ಗೆ ಪೋಲಿಸರಿಗೆ ಪಿರ್ಯಾದಿಯನ್ನು ನನ್ನ ತಂದೆ ನೀಡಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರವಾಗಿಃ ಶ್ರೀ ಎಸ್ ಕೆ ಪಿ ವಕೀಲರಿಂದ (ಡಿ ಎಲ್ ಎಸ್ ಎ ಪರವಾಗಿ)</u>

ಶಬಾನಾಳ ಮಗ ಆರೋಪಿಯ ಮನೆಯಲ್ಲಿದ್ದಾನೆ. ಶಬಾನಾಳ ಮಗಳು ಆಲಿಯಾ ನಮ್ಮ ಜೊತೆ ಇದ್ದಾಳೆ. ಮದುವೆ ಮಾತುಕತೆಯಾದ ನಂತರ ನಮ್ಮ ಆರೋಪಿಯ ಮನೆಗೆ ಹೋಗಿ, ಆರೋಪಿ ಮನೆಯವರು ನಮ್ಮ ಮನೆಗೆ ಬಂದು ಎಲ್ಲರೂ ಚೆನ್ನಾಗಿದ್ದಾರೆ ಎಂದು ತಿಳಿದುಕೊಂಡು ಶಬಾನಾಳನ್ನು ಆರೋಪಿಗೆ ಮದುವೆ ಮಾಡಿ ಕೊಟ್ಟಿದ್ದು ಎಂದರೆ ಸರಿ.

ಆರೋಪಿಯು ಆತನ ಮದುವೆಯ ಸಂದರ್ಭದಲ್ಲಿ ಮುನವಳ್ಳಿಯಲ್ಲಿ ಯಗ್ಗರೈಸ್ ವ್ಯಾಪಾರ ಮಾಡುತ್ತಿದ್ದ. ಆ ಸಂದರ್ಭದಲ್ಲಿ ಆರೋಪಿ ರಾತ್ರಿ 12.00 ಗಂಟೆ ಸಮಯಕ್ಕೆ ಮನೆಗೆ ಬರುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಮುನವಳ್ಳಿ ಮನೆಯಲ್ಲಿ ಆತನ ತಾಯಿ ಮತ್ತು ಆತನ ಮಗ ಮಾತ್ರ ಇರುತ್ತಾರೆ ಎಂದರೆ ಸರಿ. ಶಬಾನಾಳ ಮದುವೆಯಾದ ನಂತರ ನಾವು ಆರೋಪಿಯ ಮನೆಗೆ ಹೋಗಿ ಬರುತ್ತಿದ್ದೆವು ಮತ್ತು ಆರೋಪಿಯ ಮನೆಯವರು ನಮ್ಮ ಮನೆಗೆ ಹೋಗಿ ಬರುತ್ತಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ಆರೋಪಿ ಮತ್ತು ಶಬಾನಾಳ ಮಧ್ಯೆ ಸಂಬಂಧ ಸರಿ ಇತ್ತು ಎಂದರೆ ಸರಿ.

ಆರೋಪಿ ತನಗೆ ಹಿಂಸೆ ನೀಡುತ್ತಿದ್ದಾನೆ ಎಂದು ಶಬಾನಾ ನಮಗೆ ಹೇಳಿದ ನಂತರ ಮಾತುಕತೆಗಾಗಿ ನಾವು ಆರೋಪಿಯ ಮನೆಗೆ ಹೋಗುವ ಮೊದಲು ಆರೋಪಿಯ ಮನೆಗೆ ಹೋಗುವ ವಿಷಯವನ್ನು ಆರೋಪಿಗೆ ತಿಳಿಸಿದ್ದೆವು. ಆರೋಪಿ ತನಗೆ ಹಿಂಸೆ ನೀಡುತ್ತಾನೆ ಎಂದು ಶಬಾನಾ ನಮ್ಮಲ್ಲಿ ಹೇಳಿರುತ್ತಾಳೆ ಎನ್ನುವುದಕ್ಕಿಂತ ಪೂರ್ವದಲ್ಲಿ ಆರೋಪಿಯು ನನ್ನ ತಂದೆಯಲ್ಲಿ ಶಬಾನಾಳ ನಡತೆ ಸರಿ ಇಲ್ಲವೆಂದು ತಿಳಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ಶಬಾನಾ ತೀರಿಕೊಳ್ಳುವುದಕ್ಕಿಂತ ಸುಮಾರು ಒಂದು ವರ್ಷದ ಹಿಂದೆ ನಾವು ಮಾತುಕತೆಗಾಗಿ ಆರೋಪಿಯ ಮನೆಗೆ ಹೋಗಿದ್ದೆವು. ಸದರಿ ಮಾತುಕತೆಯಲ್ಲಿ ನಮ್ಮ ಊರಿನ ಹಿರಿಯರು ಮಾತನಾಡಿರುತ್ತಾರೆ. ಸದರಿ ಮಾತುಕತೆಯಲ್ಲಿ ಊರಿನ ಹಿರಿಯರು ಶಬಾನಾಳಿಗೆ ಬುದ್ದಿಮಾತು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಶಬಾನಾಳ ಮೇಲೆ ಸಂಶಯ ಪಡುವ ಬಗ್ಗೆ ಆರೋಪಿಗೆ ಊರಿನ ಹಿರಿಯರು ಬುದ್ಧಿವಾದ ಹೇಳಿರುತ್ತಾರೆ. ಸದರಿ ಮಾತುಕತೆಯಲ್ಲಿ ಆರೋಪಿಯ ಊರಿನ ಹಿರಿಯರು ಸಹ ಇದ್ದರು. ಸದರಿ ಮಾತುಕತೆಯಲ್ಲಿ ಆರೋಪಿಯ ಊರಿನ ಹಿರಿಯರು ಶಬಾನಾಳಿಗೆ ಏನು ಬುದ್ದಿಮಾತು ಹೇಳಿಲ್ಲ.

ಶಬಾನಾಳಿಗೆ ಬೇರೆ ವ್ಯಕ್ತಿಗಳ ಜೊತೆ ಸಂಬಂಧ ಇದೆ ಎಂದು ಹೇಳಿಕೊಂಡು ಶಬಾನಾಳು ಸವದತ್ತಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸ ಮಾಡಲು ಪ್ರಾರಂಭಿಸಿದ್ದು ಎಂದರೆ ಸರಿ. ಸವದತ್ತಿಯಲ್ಲಿ ಚಾಸಾ-20 ಹುಸೇನಸಾಬ್ ಮಂಟೂರೆ ಇವನಿಗೆ ಐಸ್ ಫ್ಯಾಕ್ಟರಿ ಇದೆ ಮತ್ತು ಸದರಿ ಐಸ್ ಫ್ಯಾಕ್ಟರಿಯಲ್ಲಿ ಆರೋಪಿ ಕೆಲಸ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಸವದತ್ತಿಯಲ್ಲಿ ವಾಸ ಮಾಡಲು ಪ್ರಾರಂಭಿಸಿದ ಸ್ವಲ್ಪ ದಿನಗಳ ನಂತರ ಆರೋಪಿಗೆ ಹರ್ನಿಯ ಆಗಿತ್ತು ಮತ್ತು ಆರೋಪಿಗೆ ಆ ಬಗ್ಗೆ ಶಸ್ತ್ರ ಚಿಕಿತ್ಸೆ ಆಗಿತ್ತು ಎಂದರೆ ಸರಿ. ಆ ರೀತಿ ಶಸ್ತ್ರ ಚಿಕಿತ್ಸೆಯಾದ ನಂತರ ಆರೋಪಿಯು ಮೂರು ತಿಂಗಳ ಕಾಲ ವಿಶ್ರಾಂತಿಯಲ್ಲಿರಬೇಕು ಆತನಿಗೆ ವೈದ್ಯರು ಸಲಹೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಆರೋಪಿಗೆ ಶಸ್ತ್ರ ಚಿಕಿತ್ಸೆಯಾದ ನಂತರ ನಾನು ಆರೋಪಿಯ ಮನೆಗೆ ಹೋಗಿಲ್ಲ. ಆದರೆ ಆರೋಪಿ ಆಸ್ಪತ್ರೆಯಲ್ಲಿದ್ದಾಗ ನಾನು ಮತ್ತು ನನ್ನ ತಾಯಿ ಆಸ್ಪತ್ರೆಗೆ ಹೋಗಿದ್ದೆವು.

ಮುನವಳ್ಳಿಯಲ್ಲಿ ಆರೋಪಿಗೆ ಮನೆಯನ್ನು ಹೊರತು ಪಡಿಸಿ ಬೇರೆ ಆಸ್ತಿ ಇಲ್ಲ ಎಂದರೆ ಸರಿ. ಆರೋಪಿಯ ಮದುವೆ ಸಮಯದಲ್ಲಿ ಆತನಿಗೆ ಮನೆಯ ಹೊರತಾಗಿ ಬೇರೆ ಆಸ್ತಿ ಇರಲಿಲ್ಲ ಎಂದರೆ ಸರಿ. ಆರೋಪಿಗೆ ಶಸ್ತ್ರ ಚಿಕಿತ್ಸೆಯಾಗಿ ಆತ ಮನೆಯಲ್ಲಿದ್ದಾಗ ಮನೆ ನಡೆಸುವ ಸಲುವಾಗಿ ಶಬಾನಾ ಮೂರು ತಿಂಗಳ ಕಾಲ ಐಸ್ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗಿದ್ದಳು ಎಂದರೆ ನನಗೆ ಗೊತ್ತಿಲ್ಲ. ಸವದತ್ತಿಯಲ್ಲಿ ವಾಸ ವಾಡುತ್ತಿದ್ದಾಗಲೂ ಸಹ ಶಬಾನಾ ಬೇರೆ ಗಂಡಸರ ಜೊತೆ ಓಡಾಡುತ್ತಿದ್ದಳು ಎಂದು ಆರೋಪಿ ನಮ್ಮಲ್ಲಿ ಹೇಳಿದ್ದ ಎಂದರೆ ಸರಿಯಲ್ಲ. ಶಬಾನಾ ಸವದತ್ತಿಯಲ್ಲಿ ವಾಸ ಮಾಡುತ್ತಿದ್ದಾಗ ಬೇರೆ ಗಂಡಸರು ಸದರಿ ಮನೆಗೆ ಹೋಗಿ ಬರುತ್ತಿದ್ದರು ಎಂದು ಆರೋಪಿ ನಮ್ಮಲ್ಲಿ ಹೇಳಿದ್ದ ಎಂದರೆ ಸರಿಯಲ್ಲ. ಶಬಾನಾಳು ಆರೋಪಿಯ ವಿರುದ್ಧ ವಿಚ್ಛೇದನ ಕೇಳಿದ್ದು ಎಂದರೆ ಸರಿ. ತಾನು ಹೇಳಿದ ಹಾಗೇ ಶಬಾನಾ ಕೇಳುವುದಿಲ್ಲ ಎಂದು ಆರೋಪಿ ವಿಚ್ಛೇದನಕ್ಕೆ ಒಪ್ಪಿಗೆ ನೀಡಿದ್ದು ಎಂದರೆ ಸರಿಯಲ್ಲ.

ಶಬಾನಾ ಆರೋಪಿಯನ್ನು ಬಿಟ್ಟು ಸವದತ್ತಿಯಲ್ಲಿ ಪ್ರತ್ಯೇಕ ಬಾಡಿಗೆ ಮನೆ ಮಾಡಿಕೊಂಡು ವಾಸ ಮಾಡುತ್ತಿದ್ದಿದ್ದು ಎಂದರೆ ಸರಿ. ಈ ಕೇಸಿನ ಘಟನೆಯ ಸಂದರ್ಭದಲ್ಲಿ ಆಲಿಯಾ ಶಾಲೆಗೆ ಹೋಗುತ್ತಿದ್ದಳು, ಆದರೆ ಘಟನೆಯ ದಿನ ಅವಳು ಶಾಲೆಗೆ ಹೋಗಿರಲಿಲ್ಲ. ಚಾಸಾ-20 ನೇಯವನು ಫೋನ್ ಮಾಡಿ ನನಗೆ ಘಟನೆಯ ಬಗ್ಗೆ ಹೇಳಿದಾಗ ಶಬಾನಾಳ ಕೊಲೆ ಬೆಳಿಗ್ಗೆ 10.30 ಗಂಟೆಗೆ ಆಗಿದೆ ಎಂದು ಹೇಳಿರುತ್ತಾನೆ. ಸದರಿ ವಿಷಯ ಗೊತ್ತಾದ ನಂತರ ನಾವು ಸವದತ್ತಿಗೆ ಹೋಗಲು ನಾವು ಊರನ್ನು 11.00 ಗಂಟೆಗೆ ಬಿಟ್ಟಿರುತ್ತೇವೆ. ನಂತರ ನಾವು ಸವದತ್ತಿಯನ್ನು ತಲುಪುವಾಗ ಸಮಯ ಅಪರಾಹ್ನ 01.00 ರಿಂದ 01.30 ಗಂಟೆ ಆಗಿತ್ತು ನಮ್ಮ ಜೊತೆಯಲ್ಲಿ ಸವದತ್ತಿಗೆ ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ಊರಿನ ಹಿರಿಯರೇಲ್ಲರೂ ಬಂದಿರುತ್ತಾರೆ.

ಪ್ರಾಸಾ-1 ಮಹೇಶ ಪಾಟೀಲ ನಮ್ಮ ಊರಿನಲ್ಲಿ ಹಿರಿತನ ಮಾಡುತ್ತಾನೆ ಎಂದರೆ ಸರಿ. ಆತನ ಮಾತನ್ನು ನಮ್ಮ ಊರಲ್ಲಿ ಎಲ್ಲರೂ ಕೇಳುತ್ತಾರೆ ಎಂದರೆ ಸರಿ. ಈ ಕೇಸಿನ ಘಟನೆಯಾಗುವುದಕ್ಕಿಂತ ಹಿಂದೆ ಸವದತ್ತಿಯ ಶಬನಾಳ ಮನೆಗೆ ನಾನು ಹೋಗಿಲ್ಲ. ಘಟನೆಯ ದಿನ ನಾನು ಸದರಿ ಮನೆಗೆ ಹೋದಾಗ ಆಲಿಯಾ ಮನೆಯೊಳಗೆ ಇದ್ದಳು. ಘಟನೆಯ ಬಗ್ಗೆ ನನ್ನ ತಂದೆ ಪಿರ್ಯಾದಿ ಕೊಡಲು ಪೋಲಿಸ ಠಾಣೆಗೆ ಹೋದಾಗ ಪೋಲಿಸ ಠಾಣೆಗೆ ನಾನು ಹೋಗಿಲ್ಲ. ನಾನು ಶಬಾನಾಳ ಮನೆಗೆ ಹೋದಾಗ ಅಲ್ಲಿ ಪೋಲಿಸರು ಇದ್ದರು. ಪೋಲಿಸರಿಗೆ ನೀಡಿದ ಪಿರ್ಯಾದಿಯನ್ನು ಯಾರು ಬರೆದುಕೊಟ್ಟಿದ್ದು ಎಂದು ನನಗೆ ಗೊತ್ತಿಲ್ಲ. ಶಬಾನಾಳನ್ನು ಯಾರೋ ಕೊಲೆ ಮಾಡಿ ಹೋಗಿದ್ದು ಎಂದರೆ ಸರಿಯಲ್ಲ. ಆರೋಪಿಯ ಮೇಲಿನ ಸೇಡಿಗಾಗಿ ಶಬಾನಾಳ ಕೊಲೆ ಘಟನೆಯನ್ನು ಆರೋಪಿ ಮಾಡಿದ್ದಾನೆಂದು ನಂತರ ನಾವೇಲ್ಲಾ ಸೇರೀ ಮಾತುಕತೆ ಮಾಡಿಕೊಂಡು ಆರೋಪಿ ವಿರುದ್ದ

ಸುಳ್ಳು ಕೇಸ ಹಾಕಿದ್ದು ಎಂದರೆ ಸರಿಯಲ್ಲ. ಶಬಾನಾಳು ತೀರಿಕೊಂಡ ನಂತರ, ಆರೋಪಿಯು ಶಬಾನಾಳಿಗೆ ಹಿಂಸೆ ನೀಡುತ್ತಿದ್ದ ಎನ್ನುವ ವಿಷಯವನ್ನು ಸುಳ್ಳಾಗಿ ಸೃಷ್ಟಿಸಿಕೊಂಡು ಹೇಳಿದ್ದು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.